<u>**ಪ್ರಕಟಣೆಯ ಕೃಪೆಗಾಗಿ**</u>

<u>**ದಿನಾಂಕ:** 12.12.2019</u>

# 'ಮಕ್ಕಳು ಇಂದೇ ಪ್ರಜೆಗಳು – ಪ್ರಜೆಗಳ ಹಕ್ಕೊತ್ತಾಯಕ್ಕೆ ಎಲ್ಲಾ ಹಂತದ ಸರ್ಕಾರಗಳಿಂದ ಮನ್ನಣೆ ಸಿಗಲಿ' ಬಳ್ಳಾರಿ ಜಿಲ್ಲೆಯ 'ಭೀಮಸಂಘ' – ದುಡಿಯುವ ಮಕ್ಕಳ ಸಂಘಟನೆಯ ಹಕ್ಕು ಮಂಡನೆ

ದುಡಿಯುವ ಮಕ್ಕಳ ಸಂಘಟನೆಯಾದ 'ಭೀಮ ಸಂಘ'ಕ್ಕೆ ಅವರ ವಿಷಯಗಳ ಬಗ್ಗೆ ಪ್ರಸ್ತಾಪಿಸಲು, ಅವುಗಳ ಕುರಿತಾಗಿ ವಿವಿಧ ಹಂತದ ಸರ್ಕಾರಗಳ ಜೊತೆ ವಕೀಲಿ ನಡೆಸಲು, ಅವರ ಜೀವನಕ್ಕೆ ಸಂಬಂಧಿಸಿದ ವಿಷಯಗಳ ಕುರಿತಾದ ತೀರ್ಮಾನಗಳಲ್ಲಿ ಅವರ ಭಾಗವಹಿಸುವಿಕೆಗೆ ಒತ್ತು ನೀಡಿ, ಅವರ ಹಕ್ಕುಗಳನ್ನು ಎತ್ತಿ ಹಿಡಿಯಲು ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನ 12 ಪಂಚಾಯತ್‌ಗಳಲ್ಲಿ ದುಡಿಯುವ ಮಕ್ಕಳೊಂದಿಗೆ ನಮ್ಮ ಸಂಸ್ಥೆ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸುಮಾರು ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿದೆ.

ಇತ್ತೀಚೆಗೆ, ಸೆಪ್ಟೆಂಬರ್ ತಿಂಗಳಿನಲ್ಲಿ ಈ ಎರಡೂ ತಾಲೂಕುಗಳ 5 ಗ್ರಾಮ ಪಂಚಾಯತ್‌ಗಳ ಸುಮಾರು 125ಕ್ಕೂ ಹೆಚ್ಚು ಮಕ್ಕಳು ದುಡಿಯುವ ಮಕ್ಕಳು ಇತರ ಪಂಚಾಯತ್‌ಗಳ 'ಭೀಮಸಂಘ'ವನ್ನು ಪ್ರತಿನಿಧಿಸುತ್ತಾ ಅವರ ಜೀವನದ ಮೇಲೆ ಪರಿಣಾಮ ಬೀರುವಂತಹ ಹಲವಾರು ಪ್ರಮುಖ ಅಂಶಗಳ ಮೇಲೆ ಬೆಳಕು ಚೆಲ್ಲಿದರು. ಇದರ ಅನುಸರಣೆಯಾಗಿ ಸಂಬಂಧಪಟ್ಟ ಸ್ಥಳೀಯ ಸರ್ಕಾರಗಳೊಂದಿಗೆ ಮಾತುಕತೆ ನಡೆಸಿ ಎತ್ತಿದ ಸಮಸ್ಯೆಗಳ ಪರಿಹಾರಕ್ಕಾಗಿ ಒತ್ತಾಯಿಸಿ ಪಂಚಾಯತ್ ಸಮಸ್ಯೆಗಳ ಕುರುಹಾಗಿ ಎದುರಿರುವ ಮರಕ್ಕೆ ಕೆಂಪು ಪಟ್ಟಿ ಕಟ್ಟಿದರು. ಈ ಮಕ್ಕಳು ಎತ್ತಿದ ಸಮಸ್ಯೆಗಳ ಗಂಭೀರತೆಯನ್ನು ಅರ್ಥ ಮಾಡಿಕೊಂಡ ಹಲವು ಸ್ಥಳೀಯಾಡಳಿತದ ಪ್ರತಿನಿಧಿಗಳು, ಸಮುದಾಯದ ಸದಸ್ಯರು ದುಡಿಯುವ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯಲು ಮಕ್ಕಳೊಂದಿಗೆ ಒಟ್ಟಾಗಿ 'ಗಟ್ಟಿಗುಂಪು' ರಚನೆ ಮಾಡಿಕೊಂಡರು. ಮಕ್ಕಳು ಎತ್ತಿದ ಸಮಸ್ಯೆಗಳಿಗೆ ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯತ್ ತಕ್ಷಣ ಪ್ರತಿಸ್ಪಂದಿಸಿ ಕೆಲವು ಸಮಸ್ಯೆಗಳಿಗೆ ಪರಿಹಾರ ಕ್ರಮ ಕೈಗೊಂಡಿದ್ದು ಶ್ಲಾಘನೀಯ. ಪಂಚಾಯತ್ ಕೈಗೊಂಡ ಈ ಕ್ಷಿಪ್ರ ಪ್ರತಿಕ್ರಿಯೆಯನ್ನು ಗುರುತಿಸಿ, ಪರಿಹಾರವಾದ ಸಮಸ್ಯೆಗಳ ಕುರುಹಾಗಿ ಮಕ್ಕಳು ಕೆಂಪುಪಟ್ಟಿ ಬಿಚ್ಚಿ ಅದನ್ನು ಬಿಳಿಪಟ್ಟಿಯನ್ನಾಗಿಸಿದರು. ಆದರೆ ಹಲವು ಸಮಸ್ಯೆಗಳ ಪರಿಹಾರಕ್ಕೆ ಕೇವಲ ಸ್ಥಳೀಯಾಡಳಿತದಿಂದ ಮಾತ್ರ ಸಾಧ್ಯವಿಲ್ಲ. ವಿವಿಧ ಹಂತದ ಸರ್ಕಾರಗಳು ಪಂಚಾಯತ್ ಜೊತೆ ಜಂಟಿಯಾಗಿ ಕಾರ್ಯಪ್ರವೃತ್ತರಾಗುವುದು ಅತ್ಯಂತ ಅಗತ್ಯ.

ಈ ಹಿನ್ನೆಲೆಯಲ್ಲಿ, ಭೀಮಸಂಘದ 'ಗಟ್ಟಿಗುಂಪು' ನವೆಂಬರ್ 27, 2019 ರಂದು ಹೂವಿನಹಡಗಲಿ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯವರ ಉಪಸ್ಥಿತಿಯಲ್ಲಿ ತಾಲೂಕು ಮಟ್ಟದ ಜಾರಿಪಡೆ ನಡೆಸಿ ತಮ್ಮ ತಮ್ಮ ಪಂಚಾಯತ್‌ಗಳಲ್ಲಿ ತಾವು ಎತ್ತಿದ ಸಮಸ್ಯೆಗಳು, ಸ್ಥಳೀಯ ಸರ್ಕಾರಗಳ ಸ್ಪಂದನೆ – ಕೈಗೊಂಡ ಪರಿಹಾರ ಕ್ರಮಗಳ ಬಗ್ಗೆ ಚರ್ಚಿಸಿ, ತಕ್ಷಣದ ಸ್ಪಂದನೆಗೆ ಅಭಿನಂದಿಸಿದರು. ಅಲ್ಲದೇ ಇನ್ನೂ ಇರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಗ್ರಾಮ ಪಂಚಾಯತ್ ಜೊತೆ ಬೇರೆ ಹಂತದ ಸರ್ಕಾರಗಳು ಕೈಜೋಡಿಸುವ ಅಗತ್ಯತೆಯ ಬಗ್ಗೆ ಗಮನ ಸೆಳೆದರು.

**ಕೇವಲ ಸೌಲಭ್ಯಗಳ ಕುರಿತಾಗಷ್ಟೇ ಸಮಸ್ಯೆಗಳಿವೆಯೆಂದು ಧ್ವನಿ ಎತ್ತದೇ ಇಂದಿಗೂ ಸಮುದಾಯಗಳಲ್ಲಿರುವ ಸಾಮಾಜಿಕ ಅಸಮಾನತೆಗಳು, ತಾರತಮ್ಯಗಳು, ಆಚರಣೆಯಲ್ಲಿರುವ ಸಾಮಾಜಿಕ ಕೆಟ್ಟ ಪದ್ಧತಿಗಳು, ಮಕ್ಕಳ ವಿಷಯಗಳ ಕುರಿತಾದ ತೀರ್ಮಾನದಲ್ಲಿ ಮಕ್ಕಳ ಭಾಗವಹಿಸುವಿಕೆಗೆ ಅವಕಾಶ ಇಲ್ಲದಿರುವುದು, ಜೀವನೋಪಾಯಕ್ಕಾಗಿ ಅನಿವಾರ್ಯವಾಗಿರುವ ವಲಸೆ, ಇದರಿಂದಾಗಿ ಮಕ್ಕಳ ಕೌಟುಂಬಿಕ, ಶೈಕ್ಷಣಿಕ, ರಕ್ಷಣೆಯ ಮೇಲಾಗುತ್ತಿರುವ ಪರಿಣಾಮಗಳು, ಬದುಕುವ ಹಕ್ಕಿನ ಮೇಲೆ ಗುತ್ತಿರುವ ಪ್ರಹಾರಗಳು – ಹೀಗೆ ಹತ್ತಾರು ವಿಷಯಗಳನ್ನು ಮಕ್ಕಳು ಗಂಭೀರವಾಗಿ ಎತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:**

- **ಜಾತಿ ಭೇದ–ಭಾವ**ದಿಂದ ದುಡಿಯುವ ಮಕ್ಕಳು, ಅವರ ಕುಟುಂಬದವರು ಸಾಮಾಜಿಕವಾಗಿ ಹೀನಾಯವಾಗಿ ಬದಿಗೊತ್ತಲ್ಪಟ್ಟಿದ್ದಾರೆ. ದುಡಿಯುವ ಮಕ್ಕಳು ಅತ್ಯಂತ ಅಮಾನವೀಯವಾದ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ. ಅವರು ದುಡಿಯುವ ಸ್ಥಳದಲ್ಲಿ ಅವರಿಗೆ ನೀಡುವ ಆಹಾರವನ್ನು ನೆಲದಲ್ಲಿ ಮಣ್ಣನ್ನು ಅಗಿದು ಪ್ಲಾಸ್ಟಿಕ್ ಹಾಳೆಯ ಮೇಲೆ ನೀಡಲಾಗುತ್ತಿದೆ. ಊರಿನ ದೇವಸ್ಥಾನಗಳಿಗೆ ಅವರಿಗೆ ಪ್ರವೇಶವಿಲ್ಲ. ಊರಿನಲ್ಲಿರುವ ಕ್ಷೌರಿಕರು ಅವರ ಕೇಶವನ್ನು ಕತ್ತರಿಸಲು ನಿರಾಕರಿಸುತ್ತಿದ್ದಾರೆ. ಈ ಸಮಸ್ಯೆಯನ್ನು ಅವರು ಮಕ್ಕಳ ಗ್ರಾಮ ಸಭೆಯಲ್ಲಿ, ತಾಲೂಕು ಮಟ್ಟದ ಗಟ್ಟಿಗುಂಪಿನ ಸಭೆಯಲ್ಲಿ ಹಂಚಿಕೊಂಡಿದ್ದಾರೆ. ಈ ಪರಿಸ್ಥಿತಿ ಜಿಲ್ಲೆಯ ವಿವಿಧ ಭಾಗಗಳಲ್ಲಿಯೂ ಇರಬಹುದಾಗಿದ್ದರಿಂದ ಬಳ್ಳಾರಿ ಜಿಲ್ಲಾಧಿಕಾರಿಗಳ ಗಮನಕ್ಕೂ ತಂದು, ಇಡೀ ಜಿಲ್ಲೆಯಲ್ಲಿ ಇಂತಹ ಸಾಮಾಜಿಕ ಅನಿಷ್ಠ ಪದ್ಧತಿಗಳ ನಿವಾರಣೆಗೆ ಸೂಕ್ತ ಕಾರ್ಯತಂತ್ರ ರೂಪಿಸಬೇಕೆಂದು ಮಕ್ಕಳು ತಮ್ಮ ಹಕ್ಕೊತ್ತಾಯವನ್ನು ಮಂಡಿಸಿದ್ದಾರೆ.
- **ಬಾಲ್ಯ ವಿವಾಹ**ದ ಸಮಸ್ಯೆಯನ್ನು 'ಭೀಮ ಸಂಘ'ದ ಮಕ್ಕಳು ಹಲವಾರು ವರ್ಷಗಳಿಂದ ಎದುರಿಸುತ್ತಿದ್ದಾರೆ. 'ಭೀಮ ಸಂಘ'ದ ಪ್ರಯತ್ನದಿಂದಾಗಿ ಸಾಕಷ್ಟು ಬಾಲ್ಯ ವಿವಾಹಗಳು ನಿಂತಿರುವುದು ಅತ್ಯಂತ ಶ್ಲಾಘನೀಯ ಸಂಗತಿ. ಆದರೆ ಬಾಲ್ಯ ವಿವಾಹದ ಪದ್ಧತಿ ಇನ್ನೂ ಜಾರಿಯಲ್ಲಿದ್ದು ಹೆಣ್ಣು ಮಕ್ಕಳು ಅದಕ್ಕೆ ಬಲಿಯಾಗುತ್ತಿದ್ದಾರೆ. ಇದನ್ನು ತಡೆಗಟ್ಟಲು ಯಾವುದೇ ರೀತಿಯ ಪರಿಣಾಮಕಾರಿ ಕಾರ್ಯತಂತ್ರಗಳು ಅನುಷ್ಠಾನವಾಗಿಲ್ಲ. ಇತ್ತೀಚೆಗೆ ಅಕ್ಟೋಬರ್ 2017 ರಲ್ಲಿ ಬಾಲ್ಯ ವಿವಾಹದ ಕಾಯ್ದೆಗೆ ಸೇರ್ಪಡೆಯಾಗಿರುವ ತಿದ್ದುಪಡಿ ಹಾಗು ಹೆಣ್ಣು ಮಕ್ಕಳ ಮೇಲೆ ಅದರ ತೀವ್ರವಾದ ಪರಿಣಾಮಗಳು ಮಕ್ಕಳಿಗೆ ಹಾಗು ಸಮುದಾಯದವರಿಗೆ ತಿಳಿದಿಲ್ಲ. ನ್ಯಾಯಾಧೀಶರು ಶಿವರಾಜ್ ಪಾಟೀಲ್ ಸಮಿತಿಯ ಶಿಫಾರಸ್ಸುಗಳು ಮೂಡಿ ಬಂದು 11 ವರ್ಷಗಳಾದರೂ ಕೂಡ ಅದರ ಶಿಫಾರಸ್ಸುಗಳು ಸಶಕ್ತವಾಗಿ ಜಾರಿಗೆ ಬಂದಿರುವುದು ಕಂಡುಬಂದಿಲ್ಲ. ಈ ಆಚರಣೆ ತಡೆಗಟ್ಟಲು ಹಲವಾರು ಪ್ರಬಲ ಕಾನೂನು, ನೀತಿ ನಿಯಮಗಳು ಇದ್ದರೂ ಅವುಗಳ ಅನುಷ್ಠಾನದಲ್ಲಿ ಎಡವುತ್ತಿರುವುದರಿಂದ ಇಂತಹ ಕಾನೂನುಗಳು ಹಲ್ಲುಕಿತ್ತ ಹಾವಿನಂತಾಗಿವೆ. ಇದರಿಂದ ಬಾಲ್ಯ ವಿವಾಹದ ಪದ್ಧತಿ ಮುಂದುವರೆದಿದ್ದು ಮಕ್ಕಳ ಹಕ್ಕುಗಳ ಗಂಭೀರ ಉಲ್ಲಂಘನೆಗೆ ದಾರಿ ಮಾಡಿಕೊಡುತ್ತಿದೆ.

- ಇಡೀ ಕುಟುಂಬದ ಜೀವನ ನಿರ್ವಹಣೆಗೆ ಸ್ಥಳೀಯವಾಗಿ ಯಾವುದೇ **ಸೂಕ್ತ ಜೀವನೋಪಾಯವಿಲ್ಲ**. ಹೀಗಾಗಿ ಜೀವನ ನಡೆಸಲು ಹದಿಹರೆಯದ ಮಕ್ಕಳು ಹಾಗು ಅವರ ಕುಟುಂಬದವರು **ಕೆಲಸಕ್ಕಾಗಿ ವಲಸೆ** ಹೋಗುತ್ತಿರುವುದು ಅನಿವಾರ್ಯ. ಕಾಫಿ ಎಸ್ಟೇಟ್‌ಗಳಿಗೆ, ನಗರ ಪ್ರದೇಶಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬರುತ್ತಿದ್ದಾರೆ. ಇದರಿಂದಾಗಿ ತಮ್ಮ ಮಕ್ಕಳು, ಹದಿಹರೆಯದವರು ಕೌಟುಂಬಿಕ ಸಮಸ್ಯೆ, ರಕ್ಷಣೆಯ ಸಮಸ್ಯೆ, ಶಿಕ್ಷಣದ ಸಮಸ್ಯೆ ಎದುರಿಸುತ್ತಿದ್ದಾರೆ. ಅಲ್ಲದೇ ಅನಿವಾರ್ಯವಾಗಿ ದುಡಿಮೆಗೆ ಹೋಗಬೇಕಾದ ಹದಿಹರೆಯದ ಮಕ್ಕಳು ಗ್ರಾಮದಲ್ಲಿ ಸುಭದ್ರ ವೃತ್ತಿಗಳಿಗೆ ಅವಕಾಶಗಳಿಲ್ಲದೇ ವಲಸೆ ಹೋಗುವುದರಿಂದ ಅಲ್ಲಿಯೂ ಶೋಷಣೆಗೆ ಒಳಗಾಗುತ್ತಿದ್ದಾರೆ.
- ಕುಟುಂಬದ ಜೀವನೋಪಾಯಕ್ಕೆ **ಆಧಾರವಾಗಬಹುದಾಗಿದ್ದ ನರೇಗಾ ಕಾರ್ಯಕ್ರಮ ಆಧಾರ ತಪ್ಪಿದಂತಾಗಿದೆ.** ಹೀಗಾಗಿ ಬರ–ನೆರೆ–ನಿರುದ್ಯೋಗದಿಂದಾಗಿ ಬಳಲುತ್ತಿರುವ ಸಮುದಾಯದವರಿಗೆ ಜೀವನೋಪಾಯಕ್ಕೆ ದಾರಿಕಾಣದೇ ಮಕ್ಕಳು, ಮಹಿಳೆಯರು ಎನ್ನದೇ ಎಲ್ಲರ ಬದುಕಿನ ಮೇಲೆ ಬರೆ ಎಳೆದಂತಾಗಿದೆ.
- 14 ವರ್ಷದ ಮೇಲ್ಪಟ್ಟ ಮಕ್ಕಳು ಕಾನೂನಿನ ಪ್ರಕಾರ ಸುರಕ್ಷಿತವಾದ ಕೆಲಸಗಳಲ್ಲಿ ದುಡಿಯಬಹುದು. **ಜೀವನೋಪಾಯಕ್ಕಾಗಿ ದುಡಿಮೆ ಅನಿವಾರ್ಯವಾದಾಗ ಮಕ್ಕಳು** ದುಡಿಯುವ ಮಾರ್ಗವನ್ನು ಆಯ್ಕೆ ಮಾಡಿಕೊಂಡರೆ, ಅವರಿಗೆ ಕಲಿಕೆಗೆ ಅವಕಾಶವಿಲ್ಲ. ಇಂತಹ ಮಕ್ಕಳಿಗೆ **ವೃತ್ತಿ ತರಬೇತಿ ಅವಕಾಶಗಳು** ಸಿಗುತ್ತಿಲ್ಲ. ಈಗ ಗ್ರಾಮದಲ್ಲಿ ಸಿಗುತ್ತಿರುವ ವೃತ್ತಿ ತರಬೇತಿಗಳೆಲ್ಲವೂ ಹೆಚ್ಚಾಗಿ 18 ವರ್ಷ ಮೇಲ್ಪಟ್ಟವರಿಗೆ. **ಕಲಿಕೆಯೊಂದಿಗೆ ದುಡಿಮೆಗೆ** ಯಾವುದೇ ಸೂಕ್ತ ವ್ಯವಸ್ಥೆ ಇಲ್ಲ. ಜೀವನ ನಡೆಸಲು ಸಹಕಾರಿಯಾಗುವ ಕಲಿಕೆಗೆ ಅವಕಾಶವೇ ಇಲ್ಲ.
- ಹಲವೆಡೆ ತಲೆ ಎತ್ತಿರುವ **ಅಕ್ರಮ ಮದ್ಯ ಮಾರಾಟ**ದಿಂದಾಗಿ ಕುಟುಂಬದ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತಿದೆ. ಸೂಕ್ತ ಜೀವನೋಪಾಯಕ್ಕೇ ಪರದಾಡುತ್ತಿರುವ ಪರಿಸ್ಥಿತಿ ಇರುವಾಗ ಸಮುದಾಯದ ಸಮೀಪದಲ್ಲಿಯೇ ಲಭ್ಯವಾಗುತ್ತಿರುವ ಮದ್ಯಮಾರಾಟದಿಂದಾಗಿ **ಕುಟುಂಬದ ಆರ್ಥಿಕ ಪರಿಸ್ಥಿತಿ ತೀರಾ ಶೋಚನೀಯ**ವಾಗುತ್ತಿದೆ. ಅಲ್ಲದೇ **ಮಕ್ಕಳ ಹಾಗೂ ಮಹಿಳೆಯರ ಮೇಲಿನ ಶೋಷಣೆ, ದೌರ್ಜನ್ಯ** ಇದರಿಂದಾಗಿ ಹೆಚ್ಚುತ್ತಿದೆ. ಈಗಾಗಲೇ ಈ ವಿಷಯವನ್ನು ಮಕ್ಕಳು ನವೆಂಬರ್ ತಿಂಗಳಿನಲ್ಲಿ ನಡೆದ ಮಕ್ಕಳ ಗ್ರಾಮ ಸಭೆಗಳಲ್ಲಿ ಹಾಗು ತಾಲೂಕು ಮಟ್ಟದ ಜಾರಿಪಡೆ ಸಭೆಯಲ್ಲಿ ಎತ್ತಿದ್ದಾರೆ. ಸ್ಥಳೀಯಾಡಳಿತ ಹಾಗು ಜಿಲ್ಲಾಡಳಿತವು ಅಕ್ರಮ ಮದ್ಯ ಮಾರಾಟವನ್ನು ನಿಲ್ಲಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲೇಬೇಕೆಂದು ಮಕ್ಕಳು ತಮ್ಮ ಹಕ್ಕೊತ್ತಾಯವನ್ನು ಮಂಡಿಸಿದ್ದಾರೆ.
- **ಮಕ್ಕಳ ವಿಷಯದಲ್ಲಿ ಆಗುವ ತೀರ್ಮಾನಗಳಲ್ಲಿ ಮಕ್ಕಳ ನೇರ ಭಾಗವಹಿಸುವಿಕೆ ಇರಬೇಕೆಂದು ಪ್ರಾರಂಭ ಆದ ಮಕ್ಕಳ ಗ್ರಾಮ ಸಭೆಗಳು ಹಲವೆಡೆ ನಡೆಯುವುದೇ ಇಲ್ಲ**. ಗ್ರಾಮ ಸಭೆ ನಡೆಯುವಲ್ಲಿಯೂ ಸಹ **ದುಡಿಯುವ ಮಕ್ಕಳು, ಅಂಗವಿಕಲತೆ ಇರುವ ಮಕ್ಕಳು ಹಾಗು ಬದಿಗೊತ್ತಲ್ಪಟ್ಟ ಸಮುದಾಯಗಳ ಮಕ್ಕಳು ಮಕ್ಕಳ ಗ್ರಾಮ ಸಭೆಯಲ್ಲಿ ಭಾಗವಹಿಸಲು ಅವಕಾಶವಾಗುತ್ತಿಲ್ಲ**. ಹೆಚ್ಚಿನ ಬಾರಿ ಮಕ್ಕಳ ಗ್ರಾಮ ಸಭೆಯು ಶಾಲೆಯ ಸಮಯದಲ್ಲಿ, ಶಾಲೆಯ ಆವರಣದಲ್ಲಿ ನಡೆಯುವ ಕಾರಣ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಈ ಗ್ರಾಮ ಸಭೆಗಳಲ್ಲಿ ಭಾಗವಹಿಸುವ ಅವಕಾಶದಿಂದ ವಂಚಿತರಾಗಿದ್ದಾರೆ. ಕೆಲವೊಮ್ಮೆ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ, ರಸ್ತೆಗಳು ಸರಿಯಾಗಿ ಇಲ್ಲದಿರುವುದರಿಂದ ಗ್ರಾಮ ಸಭೆಗೆ ಮಕ್ಕಳು ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ.

ಈ ಎಲ್ಲಾ ಸಮಸ್ಯೆಗಳು ತಾಲೂಕು ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ನಡೆದ ಗಟ್ಟಿಗುಂಪಿನ ಸಭೆಯಲ್ಲಿ ಪುನಃ ಪ್ರತಿಧ್ವನಿಸಿದವು. ಮಕ್ಕಳು ಎತ್ತಿದ ಇಂತಹ ಗಂಭೀರ ಸಮಸ್ಯೆಗಳ ನಿವಾರಣೆಗಾಗಿ ತಾಲೂಕು ಮಟ್ಟದ ಅಧಿಕಾರಿಗಳೊಡಗೂಡಿ ಎಲ್ಲಾ ಪಂಚಾಯತ್‌ಗಳಲ್ಲೂ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಾಲೂಕು ಕಾರ್ಯನಿರ್ವಹಣಾಧಿಕಾರಿಯವರು ಹೇಳಿದರು. ಅಲ್ಲದೇ ಮಕ್ಕಳು ಕಟ್ಟಿದ ಎಲ್ಲಾ ಕೆಂಪುಪಟ್ಟಿಗಳನ್ನು ಬಿಳಿಪಟ್ಟಿಯನ್ನಾಗಿಸುವುದರಲ್ಲಿ ತಾನು ಕಂಕಣಬದ್ಧನಾಗುತ್ತೇನೆ ಎಂದು ಮಕ್ಕಳಿಗೆ ಭರವಸೆ ನೀಡಿದರು.

**ಕೇವಲ ವ್ಯವಸ್ಥೆಗಳನ್ನು ಸರಿಪಡಿಸವ ಕುರಿತಾಗಿ ಧ್ವನಿ ಎತ್ತದೇ, ಸಮುದಾಯದಲ್ಲಿ ಬೇರು ಬಿಟ್ಟಿರುವ ಸಾಮಾಜಿಕ, ರಾಜಕೀಯ, ರಕ್ಷಣಾ ಸಮಸ್ಯೆಗಳ ಕುರಿತಾಗಿ ಧ್ವನಿ ಎತ್ತಿ ಮಕ್ಕಳ ಮೇಲೆ ಆಗುತ್ತಿರುವ ಪ್ರತ್ಯಕ್ಷ ಹಾಗೂ ಪರೋಕ್ಷ ಶೋಷಣೆಯತ್ತ ಹಡಗಲಿ ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನ ಭೀಮಸಂಘ ಮಕ್ಕಳು ಬೆಳಕು ಚೆಲ್ಲಿರುವುದು ಗಮನಾರ್ಹ. ಮಕ್ಕಳ ಹಕ್ಕೆಂದರೆ ಕೇವಲ ಶಿಕ್ಷಣವಲ್ಲ, ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವ ಎಲ್ಲಾ ಕಾನೂನುಗಳು ಅರ್ಥಪೂರ್ಣವಾಗಿ ಜಾರಿಯಾದಾಗ ಮಾತ್ರ ಅವರ ಹಕ್ಕುಗಳ ನೈಜ ಸಾಕಾರ ಸಾಧ್ಯ. ಇಂತಹ ವಿಷಯಗಳನ್ನು ಗಮನಿಸದೇ, ಲೆಕ್ಕಿಸದೇ ಕೇವಲ ರಸ್ತೆ, ಚರಂಡಿ, ಕಟ್ಟಡಗಳೇ ಅಭಿವೃದ್ಧಿ ಎಂದು ಪರಿಗಣಿಸುವ, ಅವುಗಳಿಗೇ ಹೆಚ್ಚಿನ ಒತ್ತು ನೀಡುವ ವಯಸ್ಕರಿಗೆ ಭೀಮಸಂಘದ ಮಕ್ಕಳು ಸಮಗ್ರ ಅಭಿವೃದ್ಧಿಯ ಕಲ್ಪನೆಯತ್ತ ದೃಷ್ಟಿ ಹರಿಸುವುದಕ್ಕೆ ಕರೆ ನೀಡಿದ್ದಾರೆ. ಆ ಮೂಲಕ ಮಕ್ಕಳು ಇಂದೇ ಪ್ರಜೆಗಳು, ಪ್ರಜೆಗಳಾದ ತಮ್ಮತ್ತ ಎಲ್ಲಾ ಹಂತದ ಸರ್ಕಾರಗಳು ಗಮನಹರಿಸುವುದು ಅವರ ಆದ್ಯ ಕರ್ತವ್ಯ ಎಂದು ಎಚ್ಚರಿಸಿದ್ದಾರೆ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**


- ಶ್ರೀನಿವಾಸ್ ಗಾಣಿಗ: +91 – 94822 55113
  ಸಂಯೋಜಕರು, ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ, ಕಾರ್ಯಾಲಯ: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
- ಪ್ರಭಾಕರ್ ನಾಯ್ಕ್: +91 – 94822 52601
  ಕ್ಷೇತ್ರ ಕಾರ್ಯಕ್ರಮ ಸಂಯೋಜಕರು, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್